

# ಪ್ರಭಾಸ್ ಸಿನಿಮಾ ಅಜ್ಞಾತವಾಸ ಅಂತ್ಯ

■ ವಿಶಾಖ ಎನ್.

2018ರ ಕೊನೆಯಲ್ಲಿ ಚಿತ್ರೀಕರಣ ಪ್ರಾರಂಭಿಸಿದ್ದ 'ರಾಧೆ ಶ್ಯಾಮ್' ತೆಲುಗು ಪೀರಿಯಡ್ ಸಿನಿಮಾ ಹಿಂದಿ ಭಾಷೆಯಲ್ಲೂ ಏಕಕಾಲಕ್ಕೆ ತೆರೆಕಾಣಲು ಸಜ್ಜಾಗಿದೆ. ಇದಕ್ಕೆ ತೊಡಗಿಸಿರುವ ಬಜೆಟ್ ಬರೋಬ್ಬರಿ ₹350 ಕೋಟಿ.

'ಪ್ರಯಾಣಂ', 'ಸಾಹಸಂ' ತರಹದ ತೆಲುಗು ಸಿನಿಮಾಗಳ ಸಂಭಾಷಣೆಯಿಂದ ಗುರುತಾಗಿದ್ದ ನಿರ್ದೇಶಕ ರಾಧಾಕೃಷ್ಣ ಕುಮಾರ್, 'ಜಿಲ್' ಚಿತ್ರದಿಂದ 2015ರಲ್ಲಿ ಸ್ವತಂತ್ರ ನಿರ್ದೇಶಕರಾಗಿದ್ದರು. ಪ್ರಭಾಸ್ ತರಹದ ಸೂಪರ್‌ಸ್ಟಾರ್ ಅವರ ಚಿತ್ರಕಥೆ ಕೇಳಿ ಕಾಲ್‌ಷೀಟ್ ಕೊಟ್ಟಿದ್ದು ವಿಶೇಷವೇ. ಟಿ–ಸೀರೀಸ್, ಯುವಿ ಕ್ರಿಯೇಷನ್ಸ್ ನಿರ್ಮಾಣ ಸಂಸ್ಥೆಗಳು ಈ ಚಿತ್ರಕ್ಕೆ ಹಣ ತೊಡಗಿಸಿವೆ. ಕೋವಿಡ್ ಕಾರಣದಿಂದಾಗಿ ಪದೇ ಪದೇ ಚಿತ್ರೀಕರಣ ಮುಂದಕ್ಕೆ ಹೋಗುತ್ತಾ ಬಂದ ಈ ಸಿನಿಮಾಗೆ ಕಳೆದ ವರ್ಷದ ಕೊನೆಯಲ್ಲಿ ಹೈದರಾಬಾದ್‌ನಲ್ಲಿ ಕೆಲವು ದೃಶ್ಯಗಳನ್ನು ಚಿತ್ರೀಕರಿಸಲಾಗಿತ್ತು.

ತಮನ್ ಹಾಗೂ ಜಸ್ಟಿನ್ ಪ್ರಭಾಕರನ್ ತೆಲುಗು ಅವತರಣಿಕೆಯ ಸಿನಿಮಾ ಹಾಡುಗಳಿಗೆ ಸ್ವರ ಸಂಯೋಜಿಸಿದ್ದಾರೆ. ಸಂಚಿತ್ ಬಲ್ಹಾರ, ಅಂಕಿತ್ ಬಲ್ಹಾರ, ಮಿಥುನ್, ಅಮಾನ್ ಮಲಿಕ್ ಹಿಂದಿ ಹಾಡುಗಳಿಗೆ ಮಟ್ಟು ಹಾಕಿದ್ದಾರೆ. ತೆಲುಗು ಗೀತೆಗಳನ್ನು ಕಾಪಿ ಮಾಡಿಲ್ಲ ಎನ್ನುವುದು ಚಿತ್ರ ನಿರ್ದೇಶಕರು ದೇಶ–ವಿದೇಶಗಳ ದೊಡ್ಡ ಮಾರುಕಟ್ಟೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆನ್ನುವುದಕ್ಕೆ ಸಾಕ್ಷಿ.

'ಪ್ರಭಾಸ್ ಅಂತರರಾಷ್ಟ್ರೀಯ ಮಟ್ಟದ ನಟ. ಅಮೆರಿಕದಲ್ಲಿ ನನಗೆ ಪರಿಚಯದ ಒಬ್ಬರಿಗೆ ಪ್ರಭಾಸ್ ಸಿನಿಮಾದಲ್ಲಿ ನಟಿಸುತ್ತೇನೆ ಅಂದಾಕ್ಷಣ, ಅವರು ನಿನ್ನ ಜೀವನ ಪಾವನವಾಯಿತು ಎನ್ನುವಂತೆ 'ಆಹಾ' ಎಂಬ ಉದ್ಗಾರ ತೆಗೆದರು. ಪ್ರಭಾಸ್ ಭೂಮಿತೂಕದ ನಟ. ಸರಳ ವ್ಯಕ್ತಿತ್ವದವರು. ಈ ಸಿನಿಮಾ ಅವರನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತದೆಂಬ ವಿಶ್ವಾಸವಿದೆ' ಎಂದು ನಾಯಕಿ ಪೂಜಾ ಹೆಗ್ಡೆ ಹೇಳಿದ್ದನ್ನು ಕೇಳಿ, ಪ್ರಭಾಸ್ ಮಂದಹಾಸ ಬೀರಿದ್ದರಷ್ಟೆ. ಮಾರ್ಚ್ 11ಕ್ಕೆ ಈ ಚಿತ್ರಕ್ಕೆ ಬಿಡುಗಡೆಯ ಭಾಗ್ಯ. ■

# ಮಂಜುಳೆಗಾಗಿ ಸಂಭಾವನೆ ತಗ್ಗಿಸಿಕೊಂಡ ಅಮಿತಾಭ್



'ಸೈರಾಟ್' ಮರಾಠಿ ಸಿನಿಮಾ ಮಾಡಿ, ಭಾರತದ ಇತರ ಚಿತ್ರರಂಗದವರೂ ತಿರುಗಿ ನೋಡುವಂತೆ ಮಾಡಿದ್ದವರು ನಿರ್ದೇಶಕ ನಾಗರಾಜ್ ಪೋಪಟ್‌ರಾವ್ ಮಂಜುಳೆ. ನಾಗ್ಪುರದಲ್ಲಿ ಬೀದಿ ಹುಡುಗರನ್ನು ಸೇರಿಸಿಕೊಂಡು ವಿಜಯ್ ಬರ್ಸೆ ಎಂಬುವವರು ಫುಟ್‌ಬಾಲ್ ತಂಡವೊಂದನ್ನು ಕಟ್ಟಿದ್ದರು. 2001ರಲ್ಲಿ ಕೊಳೆಗೇರಿ ಮಕ್ಕಳನ್ನು ಸರಿದಾರಿಗೆ ತರಲು ಫುಟ್‌ಬಾಲ್ ಅನ್ನೇ ಒಂದು ತಂತ್ರವನ್ನಾಗಿಸಿಕೊಂಡರು. ಇದನ್ನೇ ಚಿತ್ರಕಥೆಯಾಗಿಸಿ ನಾಗರಾಜ್ ಮಂಜುಳೆ 'ಝುಂಡ್' ಹಿಂದಿ ಸಿನಿಮಾ ತೆಗೆಯಲು ನಿರ್ಧರಿಸಿ ವರ್ಷಗಳೇ ಕಳೆದಿವೆ.

ಸಂದೀಪ್ ಸಿಂಗ್ ಎಂಬುವವರು ಈ ಚಿತ್ರ ನಿರ್ಮಿಸಲು ಮೊದಲು ಮುಂದೆ ಬಂದಿದ್ದರು. ಅಮಿತಾಭ್ ಬಚ್ಚನ್ ಅವರೇ ವಿಜಯ್ ಬರ್ಸೆ ಪಾತ್ರಕ್ಕೆ ಸೂಕ್ತ ಎಂದು ನಿರ್ಧರಿಸಿದರು. ಆದರೆ, ಅವರ ಸಂಭಾವನೆ ಮಾರುಕಟ್ಟೆಯಲ್ಲಿ ದೊಡ್ಡ ಮೊತ್ತದ್ದು. ಅಷ್ಟನ್ನು ಕೊಡುವ ಚೈತನ್ಯ ಚಿತ್ರ ನಿರ್ಮಾಪಕರಿಗೆ ಇರಲಿಲ್ಲ. ಚಿತ್ರಕಥೆ ಕೇಳಿದ ಅಮಿತಾಭ್ ತಮ್ಮ ಸಂಭಾವನೆಯ ಮೊತ್ತ ಕಡಿತಗೊಳಿಸಲು ಒಪ್ಪಿದರು ಅಷ್ಟೇ ಅಲ್ಲದೆ, ಅವರ ಸಿಬ್ಬಂದಿಯ ಸಂಭಾವನೆಯನ್ನೂ ತಗ್ಗಿಸಿದರು. ಉಳಿದ ಹಣವನ್ನೇ ಸಿನಿಮಾ ಮೇಲೆ ಹಾಕಿ ಎಂದು ಸಲಹೆ ಇತ್ತರು.

ಪುಣೆಯಲ್ಲಿ ಒಂದು ಸೆಟ್ ಹಾಕಿದ ನಾಗರಾಜ್ ಮಂಜುಳೆ, ಕ್ರಮೇಣ ಅದಕ್ಕೂ ಬಜೆಟ್ ಕುಂದುತ್ತಾ ಬಂದು ಕಂಗಾಲಾದರು. ಚಿತ್ರ ನಿರ್ಮಾಣ ಸ್ಥಗಿತಗೊಂಡಿತು. ಆಗ ಟಿ–ಸೀರೀಸ್ ನಿರ್ಮಾಣ ಸಂಸ್ಥೆಯವರು ಚಿತ್ರಕಥೆ ಕೇಳಿದ್ದೇ, ಬಂಡವಾಳ ತೊಡಗಿಸಲು ಮುಂದೆ ಬಂದರು. 2019ರ ಕೊನೆಯಲ್ಲೇ ಚಿತ್ರ ತೆರೆಕಾಣಬೇಕಿತ್ತು. ಕ್ರಮೇಣ ಅದು ಬೇರೆ ಬೇರೆ ಕಾರಣಗಳಿಂದ ಮುಂದೂಡಿಕೊಂಡು ಬಂದು, ಕೋವಿಡ್ ಅಲೆಗಳನ್ನೂ ಎದುರಿಸಬೇಕಾಗಿ ಬಂತು. ಈಗ ಅದು ತೆರೆಕಂಡಿದೆ.

ವಿಜಯ್ ಬರ್ಸೆ ಪಾತ್ರದಲ್ಲಿ ಅಭಿನಯಿಸುವ ಮೊದಲು ಅವರನ್ನೇ ಭೇಟಿಯಾಗಿ, ಅಮಿತಾಭ್ ಬಚ್ಚನ್ ಸಲಹೆಗಳನ್ನು ಪಡೆದದ್ದು ವಿಶೇಷ. 'ಸೈರಾಟ್'ನಲ್ಲಿ ಯಶಸ್ವಿ ಜೋಡಿಯಾಗಿ ನಟಿಸಿದ್ದ ಆಕಾಶ್ ತೋಸರ್, ರಿಂಕು ರಾಜ್‌ಗುರು ಈ ಸಿನಿಮಾದಲ್ಲಿಯೂ ನಟಿಸಿದ್ದಾರೆ. ■